ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೧೮ನೇ ಜನವರಿ ೧೯೮೪ ಪುಷ್ಯ ೨೮ ಶಕ ೧೯೦೫

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದ್ದರು]

ಮಂನವಿಗಳು.

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ, ನಮಗೆ ಕಳುಹಿಸಿರುವ ಕಾರ್ಯಕಲಾಪಗಳ ಪಟ್ಟಿಯಾಗಲಿ, ಪ್ರಶ್ನೋತ್ತರಗಳ ಪಟ್ಟಿಯಾಗಲಿ ಕನ್ನಡದಲ್ಲಿ ಇಲ್ಲ. ಇವತ್ತು ಕನ್ನಡ ಭಾಷೆಯ ಬಗ್ಗೆ ಬೆಂಗಳೂರು ಬಂದ್ ನಡೆಯುತ್ತಿದೆ. ನಾವು ಇಲ್ಲಿ ಶಾಸನ ಸಭೆ ಬಂದ್ ಮಾಡಬೇಕಾಗುತ್ತದೆ. ಈ ಸರ್ಕಾರದಲ್ಲಿ ಯಾರು ಕನ್ನಡ ಅಭಿಮಾನಿಗಳಿಲ್ಲವೆಂದು ಕಾಣುತ್ತೆ.

ಅಧ್ಯಕ್ಷರು.—ಕನ್ನಡ ಮತ್ತು ಆಂಗ್ಲ ಭಾಷೆಯ ಎರಡು ಪ್ರತಿಗಳನ್ನೂ ಕಳುಹಿಸಿರುತ್ತಾರೆ.

ಶ್ರೀ ಜಿ. ಎಂ. ಕಾನಡೆ.— ಇಲ್ಲ, ನಮಗೆ ಬಂದಿರುವುದು ಬರೀ ಇಂಗ್ಲೀಷ್ ಪ್ರತಿಗಳು ಮಾತ್ರ.

ಅಧ್ಯಕ್ಷರು.—ಕನ್ನಡದ ಪ್ರತಿಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ತಾವು ಕೂತುಕೊಳ್ಳಿ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಕನ್ನಡದಲ್ಲಿ ಪ್ರತಿಗಳನ್ನು ಕಳುಹಿಸುವುದಕ್ಕೆ ತಾವು ನಿರ್ದೇಶನ ಕೊಡಬೇಕು.

ಅಧ್ಯಕ್ಷರು.—ನಾಳೆಯಿಂದ ವ್ಯವಸ್ಥೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಬಂದಿರತಕ್ಕ ಕಾರ್ಯಕಲಾಪಗಳ ಪಟ್ಟಿ ಇಂಗ್ಲೀಷಿನಲ್ಲಿದೆ, ಪ್ರಶ್ನೋತ್ತರಗಳ ಪಟ್ಟಿ ಕೂಡ ಇಂಗ್ಲೀಷಿನಲ್ಲಿದೆ. ಇದನ್ನು ಮಾಡುವುದಕ್ಕೆ ವ್ಯವಸ್ಥೆ ಇಲ್ಲವೆ ?

ಅಧ್ಯಕ್ಷರು.—ಈಗತಾನೆ ವಿಷಯವನ್ನು ಹೇಳಿದ್ದೀರಿ, ಅದರ ಬಗ್ಗೆ ವ್ಯವಸ್ಥೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಹೊಸದಾಗಿ ಹೇಳುತ್ತಿರುವುದರಲ್ಲಿ ಹಿಂದೆ ಕೂಡ ಅನೇಕ ಬಾರಿ ಹೇಳಿದ್ದೇವೆ.

ಶ್ರೀ ಎ. ಬಿ. ದೇಸಾಯಿ.—ಸನ್ಮಾನ್ಯ ಅಧ್ಯಕ್ಷರೇ, ನಮಗೆ ಕನ್ನಡದಲ್ಲಿ ಹಾಗೂ ಇಂಗ್ಲೀಷಿನಲ್ಲಿ ಎರಡೂ ಭಾಷೆಗಳಲ್ಲಿ ಪ್ರತಿಗಳು ಬಂದಿಲ್ಲ.

ಅಧ್ಯಕ್ಷರು.—ಎರಡೂ ಭಾಷೆಗಳಲ್ಲಿ ಪ್ರತಿಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡೋಣ.